ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. 1965ನೇ ಇಸವಿಯಲ್ಲಿ ಏನು ಅರಣ್ಯ ಭೂಮಿ ಎಂದು ಪರಿವರ್ತನೆ ಮಾಡುವ ಆಜ್ಞೆ ಆಗಿದೆ, ಅದು ನೋಟಿಫಿಕೇಷನ್ ಆಗಿಲ್ಲ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಮತ್ತು ಸಾಕಷ್ಟು ಜಮೀನುಗಳಲ್ಲಿ ಬಿಲ್ಡಿಂಗ್‌ಗಳು ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅಂತಹ ಜಮೀನುಗಳು ಕೂಡ ಇವೊತ್ತು ಫಾರೆಸ್ಟ್ ಲ್ಯಾಂಡ್ ಎಂದು ಡಿಕ್ಲೇರ್ ಆಗಿವೆ ಅಥವಾ ಆ ರೀತಿಯಲ್ಲಿ ಪ್ರೊಸಿಡಿಂಗ್ಸ್ ಆಗಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಹೀಗಾಗಿ ನಾನು ಅರಗ ಜ್ಞಾನೇಂದ್ರರವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರೂ ಬರಲಿ, ಅಧಿಕಾರಿಗಳನ್ನೂ ಕರೆಸುತ್ತೇನೆ. ಯಾವುದು ನೋಟಿಫಿಕೇಷನ್ ಆಗಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದ್ದಾರೆ. ಆ ವಿಚಾರದಲ್ಲಿ ಕಾನೂನು ವ್ಯಾಪ್ತಿಯಲ್ಲಿ ಅದರ ಬಗ್ಗೆ ವಿಚಾರಣೆ ಮಾಡಿಕೊಂಡು ಕಾನೂನು ವ್ಯಾಪ್ತಿಯೊಳಗೆ ಅದನ್ನು ಡ್ರಾಪ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದಕ್ಕೊಂದು ಪರಿಹಾರ ಹುಡುಕುವುದಕ್ಕೆ ಸರ್ಕಾರ ಸಿದ್ದವಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಎಂ.ವೈ. ಪಾಟೀಲ್.

(ಸದನದಲ್ಲಿ ಹಾಜರಿರಲಿಲ್ಲ)

(ಈ) ವಿಷಯ: ಕೆ.ಜಿ.ಎಫ್. ಸಹಕಾರಿ ಸಂಸ್ಥೆಗೆ ಸೇರಿದ ಆಸ್ತಿಯನ್ನು ಖಾಸಗಿ ಯವರು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಬಗ್ಗೆ.

SRI S. RAJENDRAN (K.G.F.) : Sir, I call the attention of the Hon'ble Chief Minister regarding the unauthorised occupation of the property belonging to the liquidated K.G.F. Co-operative Society by M/s Saravanna T.V. Agencies.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್. ಟೌನ್ ಸಹಕಾರ ಸಂಘ, ನಿಯಮಿತ ಕೆ.ಜಿ.ಎಫ್. ರಾಬರ್ಟ್ಸನ್‌ಪೇಟೆ, ಅಂಬೇಡ್ಕರ್ ರಸ್ತೆ, ಈ ಸಂಘವು ತನ್ನ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ, ಇವರು ಸಂಖ್ಯೆ ಡಿಆರ್‌ಕೆ: ಎಲ್‌ಕ್ಯೂಡಿ: ಸಿಆರ್ 67: 2005–2006, ದಿನಾಂಕ: 25–8–2005ರಲ್ಲಿ ಸಮಾಪನಗೊಳಿಸಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ, ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಿದ್ದಾರೆ. ಸಮಾಪನಾಧಿಕಾರಿಗಳು ದಿನಾಂಕ: 05–11–2005ರಲ್ಲಿ ಪ್ರಭಾರ ವಹಿಸಿಕೊಂಡಿರುತ್ತಾರೆ. ಈ ಸಂಘದ ಭಾಗಶಃ ಆಸ್ತಿಯನ್ನು ಶ್ರೀ ಶರವಣರವರು ತನ್ನ ವಶದಲ್ಲಿಟ್ಟುಕೊಂಡಿರುವುದು ಸಮಾಪನಾಧಿಕಾರಿಗಳ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ದಾಖಲೆ ಪರಿಶೀಲಿಸಿ ಸೂಕ್ತ ಕ್ರಮ ನೀಡುವಂತೆ ಸಮಾಪನಾಧಿಕಾರಿಗಳಿಗೆ ಸೂಚಿಸಲಾಗಿದೆ. ಶ್ರೀ ಶರವಣ, ಇವರು ಸಂಘದ ಆಸ್ತಿಯನ್ನು ಅನಧಿಕೃತವಾಗಿ ತನ್ನ ವಶದಲ್ಲಿಟ್ಟುಕೊಳ್ಳಲು

ಸಂಘದ ಹಿಂದಿನ ಆಡಳಿತ ಮಂಡಳಿಯ ಸದಸ್ಯರು ಹೊಣೆಗಾರರಾಗಿರುತ್ತಾರೆ. ಕೂಲಂಕುಷ ಪರಿಶೀಲನೆ ನಂತರ ಕಾನೂನು ಪ್ರಕಾರ ಕ್ರಮವನ್ನು ಜರುಗಿಸಲಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಲಿಕ್ವಿಡೇಶನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದ ಮೇಲೆ ಒಬ್ಬರು ಅಧ್ಯಕ್ಷರು ಸೃಷ್ಟಿಯಾಗುತ್ತಾರೆ. ಷೋ ರೂಂ ಕಟ್ಟಿಕೊಳ್ಳುತ್ತಾರೆ. ಬಾಡಿಗೆ ಕೊಡುತ್ತಾರೆಂದರೆ ರಿಜಿಸ್ಟ್ರಾರ್ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಏನಾಗಿದೆ ಸಾರ್? ಅವರೇ ಹೇಳಿಬಿಡುತ್ತಾರೆ, ಲಿಕ್ವಿಡೇಶನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದ್ದೇವೆ. ಸಹಕಾರ ಸಂಘ ಇಲ್ಲ ಎಂದು ಅಲ್ಲೊಬ್ಬರು ಅಧ್ಯಕ್ಷರಾಗಿಬಿಟ್ಟಿದ್ದಾರಂತೆ, ಅವರು ಒಂದು ದೊಡ್ಡ ಷೋರೂಂ ಬಿಲ್ಡಿಂಗ್ ಕಟ್ಟಿಕೊಳ್ಳುತ್ತಿದ್ದಾರಂತೆ, ಅವರು ಷೋರೂಂ ಸ್ಟಾರ್ಟ್ ಮಾಡುತ್ತಿದ್ದಾರಂತೆ. ಏನ್ ಸಾರ್, ಈ ರಾಜ್ಯದ ಕಥೆ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವ ಉತ್ತರ ನನಗೆ ಸ್ಯಾಟಿಸ್‌ಫ್ಯಾಕ್ಷನ್ ಆಗಿದೆ. Very good answer. But what is suitable action against that fellow? Have you arrested him? Have you seized that building? ಅದರ ಬಗ್ಗೆ ತಾವು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಿ. ನಾನು I brought to your notice ತಮ್ಮ ನೋಟೀಸ್ ಕಳುಹಿಸಿದ ಮೇಲೆ ಈ ರೀತಿಯ ಉತ್ತರ ಬರುತ್ತದೆಂದರೆ, ಆ ಅಧಿಕಾರಿಗಳಾದ ಮುನಿಸಿಪಲ್ ಕಮಿಶನರ್ ಪ್ಲಾನ್ ಸ್ಯಾಂಕ್ಷನ್ ಮಾಡುವವನು, ಆ ಸಬ್ ರಿಜಿಸ್ಟ್ರಾರ್ ಏನು ಮಾಡಿಕೊಂಡಿದ್ದರು? ಆ ಕೋ-ಆಪರೇಟಿವ್ ರಿಜಿಸ್ಟ್ರಾರ್ ಏನು ಮಾಡಿಕೊಂಡಿದ್ದರು? ಅವರ ಮೇಲೂ ನೀವು ಕ್ರಮ ತೆಗೆದುಕೊಳ್ಳಬೇಕು. ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಒಂದು ಮಾತನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನನ್ನ ಗಮನವನ್ನು ಏನು ಸೆಳೆದಿದ್ದಾರೆ ಆ ಬಗ್ಗೆ ನಾನು ಆದಷ್ಟು ತಕ್ಷಣ ಇದರ ಬಗ್ಗೆ ಅವರು ಬಿಲ್ಡಿಂಗ್ ಕಟ್ಟಿರಬಹುದು ಮತ್ತು ಇಲಾಖೆಯಲ್ಲಿ ಯಾರಾದರೂ ತಪ್ಪು ಮಾಡಿರತಕ್ಕಂಥ ಅಧಿಕಾರಿಗಳೇ ಇರಬಹುದು. ಅವರ ಮೇಲೆ ಕಾನೂನಿನ ಅಡಿಯಲ್ಲಿ ನಾನು ಸೂಕ್ತ ಕ್ರಮವನ್ನು ಕಾಲ ವಿಳಂಬ ಮಾಡದೇ ತೆಗೆದುಕೊಳ್ಳುತ್ತೇನೆ.

(ಊ) ವಿಷಯ: ಮಹಿಳೆಯರು ಆಸಿಡ್ ದಾಳಿ ಹಾಗೂ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಬಗ್ಗೆ.

ಶ್ರೀಮತಿ ಟಿ. ಭಾಗೀರಥಿ (ಕೊಟ್ಟೂರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯದಲ್ಲಿ ಮಹಿಳೆಯರು ಆ್ಯಸಿಡ್ ದಾಳಿ ಹಾಗೂ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಹಿಳೆಯರ ಮೇಲೆ ಆಸಿಡ್ ಎರಚುವ ಪ್ರಕರಣಗಳಿಗೆ ಸಂಬಂಧಿಸಿದಂತೆ, 2001 ರಲ್ಲಿ